ಯನ್ನು ಮಾಡುವುದನ್ನು ಬಿಟ್ಟು ಮುನಿಸಿಪಾಲಿಟಿಯ ಹತ್ತಿರ ಕೊಡವನ್ನು ಹಿಡಿದುಕೊಂಡು ಬಂದು ಕುಳಿತಿರುತ್ತಾರೆ. ಆದುದರಿಂದ ದಯಮಾಡಿ ಈ ವರ್ಷ ಆ ಕೆಲಸವನ್ನು ಪ್ರಾರಂಭ ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಹೇಮಾವತಿಯ ಮೊದಲನೇಯ ಹಂತದ ನೀರನ್ನು 1982ರ ಹಿಂದೆ ಅಲ್ಲಿರತಕ್ಕಂತಹ ಜನಸಂಖ್ಯೆಗೆ ಅನುಗುಣವಾಗಿ ತೆಗೆದುಕೊಂಡಂಥದ್ದು. ಈಗ ಚನ್ನರಾಯಪಟ್ಟಣ ಬಹಳಷ್ಟು ಬೆಳೆದಿದೆ. ಜೊತೆಗೆ ಇವತ್ತು ಬಹಳಷ್ಟು ಬಡಾವಣೆಗಳು ಚನ್ನರಾಯಪಟ್ಟಣದಲ್ಲಿದೆ. ಗಾಯಿತ್ರಿ ಬಡಾವಣೆ, ಕೆ.ಹೆಚ್.ಬಿ. ಕಾಲೋನಿ, ರಾಮೇಶ್ವರ ಬಡಾವಣೆ, ಅಂಬೇಡ್ಕರ್ ನಗರ, ಕುವೆಂಪು ನಗರ ಇಲ್ಲಿ ಸಮರ್ಪವಾಗಿ ನೀರು ಸರಬರಾಜು ಮಾಡಲು ಸಾಕಾಗುತ್ತಿಲ್ಲ. ಆದ್ದರಿಂದ 2ನೇ ಹಂತದ ಯೋಜನೆಗೋಸ್ಕರವಾಗಿ ಇವತ್ತು 500 ಲಕ್ಷ ರೂಪಾಯಿಗಳಿಗೆ ಆ ಒಂದು ಅಂದಾಜನ್ನು ತಯಾರಿಸಿ ಸಿದ್ಧ ಮಾಡಿದ್ದೇವೆ. ಈಗ ಎರಡನೇ ಹಂತದ ಅಂದಾಜಿಗೆ ಹುಡ್ಕೋ ಸಹಾಯವನ್ನು ಪಡೆದು ಅದನ್ನು ಕಾರ್ಯಗತ ಮಾಡುತ್ತೇವೆ.

ಅಧ್ಯಕ್ಷರು:- ಪ್ರಶ್ನೆ ಸಂಖ್ಯೆ: 359 (2336)ಗೆ ಸಂಬಂಧಪಟ್ಟಂತಹ ಸಚಿವರು ಸಮಯಾವಕಾಶವನ್ನು ಕೇಳಿದ್ದಾರೆ.

ವಿಷಯ:- ದಾವಣಗೆರೆಯ ಎಲ್ಲಾ ಬಡಾವಣೆಗಳಿಗೆ ತುಂಗಭಧ್ರಾ ನೀರು ಪೂರೈಕೆ.

360 (2251) **ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ):-** ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಂಗಾಭದ್ರಾ ನದಿಯಿಂದ ದಾವಣಗೆರೆ ನಗರದ ಯಾವ ಯಾವ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಲಾಗಿದೆ?

ಆ) ಉಳಿದ ಬಡಾವಣೆಗಳಿಗೆ ಈ ಸೌಲಭ್ಯ ಕಲ್ಪಿಸಿ ಕೊಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎಸ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹಾಲಿ ತುಂಗಭದ್ರಾ ನದಿಯಿಂದ ದಾವಣಗೆರೆ ನಗರದ ವಿನೋಬನಗರದ ಅರ್ಧಭಾಗ ಮತ್ತು ಹಳೇ ದಾವಣಗೆರೆ ಎಲ್ಲಾ ಭಾಗಗಳು ಅಂದರೆ ದುರ್ಗಮ್ಮನ ದೇವಸ್ಥಾನದವರೆವಿಗೆ, ದೇವರಾಜ್ ಅರಸ್ ಬಡಾವಣೆ, ಹೊಳೆಹೊನ್ನೂರು ತೋಟ, ಎಲ್ಲಮ್ಮ ನಗರಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿದೆ.

ಆ) ದಾವಣಗೆರೆ ನಗರದ 2ನೇ ಹಂತದ ರೂ. 12.90 ಕೋಟಿ ವೆಚ್ಚದ ಕುಡಿಯುವ ನೀರು ಸರಬರಾಜು ಯೋಜನೆಗೆ ಕರ್ನಾಟಕ ಸರ್ಕಾರವು ತಮ್ಮ ಆಜ್ಞೆ ಸಂ: ವನಇ 36 ಯುಡಬ್ಲ್ಯೂಎಸ್ 92, ದಿನಾಂಕ: 16-6-1992ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುತ್ತದೆ. ಈ ಯೋಜನೆಯ ಪ್ರಕಾರ ಹೊಸ ಬಡಾವಣೆಗಳಾದ ಆಂಜನೇಯ ಬಡಾವಣೆ, ವಿದ್ಯಾನಗರ, ಹೆಚ್ಚುವರಿ ಎಂ.ಸಿ.ಸಿ. 'ಬಿ'

ಬ್ಲಾಕ್ ಬಡಾವಣೆ, ಶಾಮನೂರು ಬಡಾವಣೆ, ನಿಟ್ಟುವಳ್ಳಿ, ಕುಂದವಾಡ, ಕೆರೂರು, ಕೊಂಡಜ್ಜಿ, ಅವರಗೆರೆ, ಶ್ರೀರಾಮಗೊಂಡನಹಳ್ಳಿ ಸರ್ವೆ ನಂ. ಇವೇ ಬಡಾವಣೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಶ್ರೀ ಎನ್.ಎ. ರವೀಂದ್ರನಾಥ್:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸೇರಿದಂತಹ ಬಡಾವಣೆಗಳನ್ನು ಈಗ ದಾವಣಗೆರೆಯ ನಗರಸಭೆಗೆ ಸೇರಿಸಿದ್ದಾರೆ. ಸೇರಿದ ನಂತರ ಆ ಭಾಗದಲ್ಲಿರತಕ್ಕಂತಹ ಆಂಜನೇಯ ಬಡಾವಣೆ, ವಿದ್ಯಾನಗರ ಬಡಾವಣೆ ಆ ಭಾಗದಲ್ಲಿರುವವರು ಅವರ ಸ್ವಂತ ಹಣದಿಂದ ಮನೆಗಳಿಗೆ ಬೋರ್‌ಗಳನ್ನು ಹಾಕಿಕೊಂಡಿದ್ದರು. ಈಗ ಅಂತರ್ಜಲ ಬತ್ತಿಹೋಗಿ ನೀರಿನ ಬವಣೆಯಾಗಿದೆ. ಆದಕ್ಕೆ ಪಕ್ಕದಲ್ಲಿ ಟ್ಯಾಂಕು ಇದೆ ಆದ್ದರಿಂದ ದಯವಿಟ್ಟು ಆದಕ್ಕೆ ಕನೆಕ್ಷನ್ ಕೊಡಿಸುವಂತಹ ಕೆಲಸವನ್ನು ಮಾಡಬೇಕು, ಅದರ ಜೊತೆಗೆ ಶಾಮನೂರು ಬಡಾವಣೆ, ನಿಟ್ಟುವಳ್ಳಿ ಬಡಾವಣೆ, ಕುಂದುವಾಡ, ಕಡೂರು, ತಾವರೆಗೆರೆ ಈ ಹಳ್ಳಿಗಳಿಗೆ ಮೊದಲಿನಿಂದಲೂ ಬೋರ್ ಕೆಟ್ಟು ಹೋದರೆ ಜಿಲ್ಲಾ ಪಂಚಾಯತ್‌ನಿಂದ ರಿಪೇರಿಯನ್ನು ಮಾಡಿಸುತ್ತಿದ್ದರು. ಈಗ ಈ ರೀತಿಯ ಕೆಲಸವನ್ನು ಜಿಲ್ಲಾ ಪಂಚಾಯತ್‌ನಿಂದ ಮಾಡಬಾರದು ಎಂದು ನೀವು ಆದೇಶವನ್ನು ಮಾಡಿದ್ದೀರಿ. ಆದುದರಿಂದ ನಗರ ಸಭೆಯಿಂದಲೇ ಆದಷ್ಟು ಶೀಘ್ರದಲ್ಲಿ ಏನು ಕೊರತೆ ಇದೆ ಅದನ್ನು ಮಾಡಿಸಬೇಕು. ಅದರ ಜೊತೆಗೆ ಕೊಂಡಜ್ಜಿ ಎಂದು ಬರುತ್ತದೆ, ಇದು ಹರಿಹರದ ತಾಲ್ಲೂಕಿಗೆ ಬರುತ್ತದೆ, ಇದು ದಾವಣಗೆರೆಯಿಂದ 15 ಕಿಲೋಮೀಟರ್ ದೂರದಲ್ಲಿದೆ. ಅದು ಸಹ ದಾವಣಗೆರೆ ನಗರಸಭೆಗೆ ಸೇರಿದೆ ಎಂದು ಬರೆದಿದ್ದಾರೆ. ದಯಮಾಡಿ ಕೊಂಡಜ್ಜಿ ಎಂಬ ಊರು ನಮ್ಮ ದಾವಣಗೆರೆ ತಾಲ್ಲೂಕಿನಲ್ಲಿ ಇಲ್ಲ. ಆದು ಹರಿಹರ ತಾಲ್ಲೂಕಿನಲ್ಲಿ ಇದೆ, ಇದರ ಬಗ್ಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅದನ್ನು ಸರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ದಾವಣಗೆರೆ ಪಟ್ಟಣಕ್ಕೆ ಎರಡನೇ ಹಂತದ ಭದ್ರಾ ಕಾಲುವೆಯಿಂದ ನೀರನ್ನು ತರುವಂಥದ್ದು, ಹರಿಹರ ಪಟ್ಟಣಕ್ಕೆ ತುಂಗಭದ್ರಾ ನದಿಯಿಂದ ನೀರನ್ನು ತರುವಂಥದ್ದು ಮತ್ತು ಕೊಳವೆ ಬಾವಿ ಮತ್ತು ಕೈ ಪಂಪುಗಳಿಂದ ಮತ್ತು ಎಲ್ಲಾ ರೀತಿಯಲ್ಲಿಯೂ 32 ದಶ ಲಕ್ಷ ನೀರನ್ನು ಇವತ್ತು ಕೊಡುತ್ತಿದ್ದೇವೆ. ಅದಕ್ಕೆ ಇನ್ನು ಎರಡನೇ ಹಂತದ ಮೂಲಕ ಇನ್ನು ಜಾಸ್ತಿ ಕೊಡಬೇಕೆಂಬ ಉದ್ದೇಶದಿಂದ, ಅದಕ್ಕೆ 16.6.1992ರಲ್ಲಿ ಒಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿ, ಸುಮಾರು 130 ಲೀಟರ್‌ಗಳನ್ನಾದರೂ ನೀರನ್ನು ಪಟ್ಟಣಕ್ಕೆ ಒದಗಿಸಬೇಕು ಎಂಬ ದೃಷ್ಟಿಯಿಂದ ಮಾಡಿದ್ದೇವೆ. ತಾವು ತಿಳಿಸಿದಂತೆ, ಇವುಗಳೆಲ್ಲ ಹೊಸದಾಗಿ ಸೇರಿರತಕ್ಕಂಥ ಗ್ರಾಮಗಳು ಹಿಂದೆ ಇವುಗಳನ್ನು ಜಿಲ್ಲಾ ಪಂಚಾಯಿತಿಯವರು ನೋಡಿಕೊಳ್ಳುತ್ತಿದ್ದರು. ಇವತ್ತು ನಮ್ಮ ವ್ಯಾಪ್ತಿಗೆ ಬಂದಿರುವುದರಿಂದ, ಅವುಗಳಿಗೆ ಸಮಗ್ರವಾಗಿ ನೀರನ್ನು ಕೊಡುವಂತಹ ಒಂದು ಯೋಜನೆಯನ್ನು ರೂಪಿಸಿ, ಇವತ್ತು ತುಂಗಭದ್ರಾ ನದಿಯ ಮೂಲ, ರಾಜನ ಹಳ್ಳಿಯ ಸಮೀಪದಿಂದ ನೀರನ್ನು ತರುವಂತಹ ಒಂದು ಯೋಜನೆಗೆ ಮಂಜೂರಾತಿಯನ್ನು ಮಾಡಿದ್ದೇವೆ. ಈಗಾಗಲೇ ವಿವಿಧ ಹಂತ-

ಗಳಲ್ಲಿ ಕೆಲಸಗಳು ಆಗುತ್ತಿವೆ. ಉದಾಹರಣೆಗೆ ಪೈಪ್‌ಲೈನ್‌ಗಳನ್ನು ಹಾಕುತ್ತಿರುವಂಥದ್ದು, ಟ್ರೀಟ್‌ಮೆಂಟ್ ಪ್ಲಾನ್ಟ್ ಕಟ್ಟುವಂಥದ್ದು; ಅದಕ್ಕೆ ಬೇಕಾದಂತಹ ರಸ್ತೆ, ಇವುಗಳ ಬಗ್ಗೆ ಮಾನ್ಯ ಸದಸ್ಯರಾದ ಶಿವಪ್ಪನವರು ಮತ್ತು ತಾವುಗಳು ಜೊತೆಗೆ ಶಿವಶಂಕರಪ್ಪನವರು ಸಹ ಈ ಎರಡನೇ ಹಂತದ ನೀರನ್ನು ಪೂರೈಸಿ ಕೊಡಿ ಎಂದು ಹೇಳಿದ್ದಾರೆ. ಇದಕ್ಕೆ ಎಲ್.ಐ.ಸಿ.ಯಿಂದ ಸಾಲವನ್ನು ಸಹ ಹೆಚ್ಚಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ತೆಗೆದುಕೊಂಡು, ಸುಮಾರು 300 ಲಕ್ಷ ರೂಪಾಯಿಗಳ ಈ ಪರಿಷ್ಕರಿಸಿದ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದು ತಾವುಗಳು ಸೂಚಿಸಿದಂತೆ ಎಲ್ಲಾ ಕೆಲಸಗಳನ್ನು ಆದಷ್ಟು ಬೇಗ ಪೂರೈಸುತ್ತೇವೆ.

ಶ್ರೀ ಎನ್.ಎ. ರವೀಂದ್ರನಾಥ್:- ಮಾನ್ಯ ಅಧ್ಯಕ್ಷರೆ, ಆಂಜನೇಯ ಬಡಾವಣೆ ಮತ್ತು ವಿದ್ಯಾನಗರ ಎಂಬ ಬಡಾವಣೆಗಳಲ್ಲಿ ನೀರಿನ ತೊಂದರೆ ತುಂಬಾ ಇದೆ. ಅಲ್ಲಿ ಭೀಕರ ಬರಗಾಲದ ಪರಿಸ್ಥಿತಿಯು ಬಂದಿದೆ. ಅಲ್ಲಿ ಮೊದಲು ಎಲ್ಲಾ ಪ್ರತಿ ಮನೆಯವರು ಬೋರ್ ಹಾಕಿಸಿಕೊಂಡಿದ್ದರು. ಆಗ ಯಾವುದೇ ನಗರಸಭೆಯವರು ಆಗಲಿ, ಜಿಲ್ಲಾ ಪಂಚಾಯ್ತಿಯಿಂದ ಯಾವುದೇ ನೀರಿನ ವ್ಯವಸ್ಥೆ ಇರಲಿಲ್ಲ. ಈಗ ಪಕ್ಕದಲ್ಲಿ ಟ್ಯಾಂಕ್ ಇದೆ, ಪೈಪ್‌ಲೈನ್ ಎಳೆದಿದ್ದಾರೆ, ಅದನ್ನು ಕನೆಕ್ಷನ್ ಕೊಡಿಸುವುದಕ್ಕೆ ಬಿಟ್ಟಿದ್ದಾರೆ. ಅದಕ್ಕೆ ಸರ್ಕಾರದಿಂದ ಪರವಾನಗಿಯನ್ನು ಕೊಟ್ಟ ಕೂಡಲೇ ಕೊಡುತ್ತೇವೆಂದು ಹೇಳುತ್ತಾರೆ. ಅದನ್ನು ಕೊಟ್ಟರೆ ಅಲ್ಲಿರತಕ್ಕಂತಹ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬಹುದು. ಆದಕ್ಕೆ ನಿಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಮನವಿಯನ್ನು ಮಾಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ಉಳಿದ ಬಡಾವಣೆಗಳನ್ನು ಮಾನ್ಯ ಸದಸ್ಯರು ಸೂಚಿಸಿರತಕ್ಕಂತಹ ಶಾಮನೂರು ಬಡಾವಣೆ, ಮತ್ತು ಎಂ.ಸಿ.ಸಿ., ನಿಟ್ಟುವಳ್ಳಿ, ಕುಂದವಳ್ಳಿ, ಕೊಂಡಜ್ಜಿ, ತಾವರೆಗೆರೆ, ಶ್ರೀ ರಾಮಕೊಂಡಳ್ಳಿ ಇವೆಲ್ಲ ಏನು ಬಡಾವಣೆಗಳಿವೆ ಅದಕ್ಕೆಲ್ಲ ಇದರಲ್ಲಿಯೇ ಹಣವನ್ನು ಒದಗಿಸಿ, ಎಲ್ಲಿ ನೀರನ್ನು ತೆಗೆದುಕೊಂಡು ಕೊಡುವುದಕ್ಕೆ ಸಾಧ್ಯ ಎಂಬ ಬಗ್ಗೆ ನಾನು ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಮಾಡುತ್ತೇನೆ.

ಶ್ರೀ ಹೆಚ್. ಶಿವಪ್ಪ:- ಮಾನ್ಯ ಅಧ್ಯಕ್ಷರೆ, ಇದುವರೆಗೆ ಈ ಬಡಾವಣೆಗಳಿಗೆ ಇಷ್ಟು ವರ್ಷ ನೀರನ್ನು ಒದಗಿಸಿಲ್ಲವಲ್ಲ ಜನರ ಕಷ್ಟ ಏನಾದರೂ ಸರ್ಕಾರಕ್ಕೆ ಗೊತ್ತಾಗಿದೆಯೇ? ಕೊಂಡಜ್ಜಿ ಎಂದು ಹೇಳಿದ್ದಾರೆ, ಎಷ್ಟರ ಮಟ್ಟಿಗೆ ಅಧಿಕಾರಿಗಳು ಮಂತ್ರಿಗಳಿಗೆ ಮತ್ತು ಸದನಕ್ಕೆ ತಪ್ಪು ತಿಳುವಳಿಕೆಯನ್ನು ಕೊಡುತ್ತಾರೆಂದರೆ, ಕೊಂಡಜ್ಜಿ ಎಂಬುದು ಒಂದು ಬಡಾವಣೆಯಲ್ಲ, ಅದು ಒಂದು ಹಳ್ಳಿ ಅದು ಹರಿಹರ ತಾಲ್ಲೂಕಿಗೆ ಸೇರಿರುವಂಥದ್ದು, ದಾವಣಗೆರೆಗೆ 15 ಕಿಲೋಮೀಟರ್ ದೂರದಲ್ಲಿದೆ. ಇದನ್ನು ಬಡಾವಣೆ ಎಂದು ಹೇಗೆ ಸೇರಿಸಿದರು? ನಂತರ ಇದಕ್ಕೆ ಟೈಮ್ ಲಿಮಿಟೇಷನ್ ಇದೆಯೇ? ಇದನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಇದಕ್ಕೆ 12 ಕೋಟಿಯ ಯೋಜನೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದು, ಬೆಲೆಗಳು ಜಾಸ್ತಿಯಾಗಿರುವುದರಿಂದ ಏರಿಕೆಯ ಹಣ ಎಷ್ಟು ಆಗುತ್ತದೆ? ಆದ್ದರಿಂದ ಯಾವುದಾದರೂ ಒಂದು ಮಾನದಂಡವನ್ನು ಇಟ್ಟುಕೊಂಡು ಕೆಲಸವನ್ನು ಮಾಡುತ್ತೀರೋ ಅಥವಾ

ಇಲ್ಲವೋ? ಈ ಬಡಾವಣೆಗಳ ಗತಿ ಏನಾಗಿದೆ? ಇಲ್ಲಿರತಕ್ಕಂತಹ ಜನರು ಮುನಿಸಿಪಾಲಿಟಿಗೆ ಟ್ಯಾಕ್ಸ್‌ನ್ನು ಕೊಡುತ್ತಿದ್ದಾರಲ್ಲಾ, ಇವರಿಗೆ ನೀರನ್ನು ಒದಗಿಸುವಂತಹ ಕರ್ತವ್ಯ ಸರ್ಕಾರದ್ದು ಅಲ್ಲವೇ? ಏನು ಮಾಡಿದ್ದೀರಿ?

ಶ್ರೀ ಬಿ.ಎಸ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೆ, ನಿರ್ವಹಣೆಯ ಕಾರ್ಯವನ್ನು ನಗರಸಭೆಯವರೇ ವಹಿಸಿಕೊಂಡಿರುವಂಥದ್ದು, ಆ ಕಾರ್ಯವನ್ನು ಕರ್ನಾಟಕ ನೀರು ಸರಬರಾಜು ಮಂಡಳಿಯಿಂದ ಮಾಡುತ್ತಿಲ್ಲ. ತಾವು ಏನು ಏರಿಕೆ ಹಣವನ್ನು ಹೇಳುತ್ತಿದ್ದೀರಿ 12.90 ಕೋಟಿ ರೂಪಾಯಿಗಳಿಗೆ ಜಾಸ್ತಿಯಾಗುವಂತಹ ಹಣವನ್ನು ಏರಿಕೆ ಹಣಕ್ಕೆ ಒಪ್ಪಿಕೊಂಡು ಮಾಡಿಕೊಡುತ್ತೇವೆ. ಮತ್ತು ಹೊಸದಾಗಿ ಬಡಾವಣೆಗಳು, ಮತ್ತು ಹೊಸ ಗ್ರಾಮಗಳು ನಗರ ಪ್ರದೇಶದ ಗಡಿ ವ್ಯಾಪ್ತಿಯಿಂದ ಜಾಸ್ತಿ ಹೋಗಿರುವಂಥದ್ದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಹೇಳಿದ್ದೀರಿ, ಮಾನ್ಯ ಸದಸ್ಯರಾದ ಶ್ರೀ ರವೀಂದ್ರನಾಥ್ ಕೇಳಿದ ಪ್ರಶ್ನೆ ನಮಗೆ ಗೊತ್ತಿರತಕ್ಕಂಥದ್ದು. ನಾವು ಅನೇಕ ಸಾರಿ ಭೇಟಿಯನ್ನು ಮಾಡಿದ್ದೆವು. ತಾವು ಇದು ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೀರಿ, ಆದ್ದರಿಂದ ಮಾನ್ಯ ಸದಸ್ಯರು ತಿಳಿಸಿರುವಂಥದ್ದಕ್ಕೆ ಅದಕ್ಕೆ ಆಗುವ ಖರ್ಚು ಮತ್ತು ಅಲ್ಲಿಯ ನಗರಸಭೆಯವರು ನಿರ್ವಹಿಸುವಂತಹ ಎಲ್ಲಾ ಕಾರ್ಯವನ್ನು ಮಾಡುತ್ತೇವೆ. ಮತ್ತೆ ಕೊಂಡಜ್ಜಿ ಏನಿದೆ, ಈ ಗ್ರಾಮ ಸೇರಿದೆಯಾ ಹಾಗು ಇದು 15 ಕಿಲೋಮೀಟರ್ ದೂರದಲ್ಲಿದೆಯೇ ಎಂಬ ಆ ಬಗ್ಗೆ ನನಗೆ ಅಂದಾಜು ಇಲ್ಲ, ಯಾವ್ಯಾವುದು ಸೇರಿದೆ ಎಂದು ಗೊತ್ತಿಲ್ಲ. ಶ್ರೀ ರವೀಂದ್ರನಾಥ್‌ರವರು ಹೇಳಿರುವುದು ಗೊತ್ತಿದೆ. ಅದು ಸೇರಿದ್ದರೆ ಅದಕ್ಕೂ ನೀರು ಕೊಡುವಂತಹ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಹೆಚ್. ಶಿವಪ್ಪ:- ಅದು ಸೇರಿಲ್ಲ, ಅದನ್ನು ಸೇರಿಸುವ ಪ್ರಮೇಯ ಏನೂ ಇಲ್ಲ.

ಅಧ್ಯಕ್ಷರು:- ಇದರಲ್ಲಿ ಸ್ವಲ್ಪ ತಪ್ಪಾಗಿದೆ.

SRI. H. SHIVAPPA:- That need not be included at all.

ಅಧ್ಯಕ್ಷರು:- ಅದು 15 ಕಿ.ಮೀ. ನಿಂದ ಆಚೆ ಇದೆ, ಅದು ಬರುವುದಿಲ್ಲ.

ಶ್ರೀ ಹೆಚ್. ಶಿವಪ್ಪ:- ಯಾವ ರೀತಿ ಇದನ್ನು ಅವರು ಕೊಟ್ಟಿದ್ದಾರೆ? ಕಣ್ಣು ಮುಚ್ಚಿಕೊಂಡು ಕೊಟ್ಟಿದ್ದಾರೆಯೇ?

ಅಧ್ಯಕ್ಷರು:- ಅದನ್ನೇ ದೊಡ್ಡದು ಮಾಡಬೇಡಿ. ಆಫೀಸ್‌ನಲ್ಲಿ ಮಿಸ್ಟೇಕ್ ಆಗಿದೆ. ಟೈಪ್ ಮಾಡಿದವನು ಯಾರೋ ಕೊಂಡಜ್ಜಿ ಊರಿನವನು ಇರಬಹುದು, ಖುಷಿಗೆ ಅವನ ಊರನ್ನು ಸೇರಿಸಿರುತ್ತಾನೆ. ಅದನ್ನೇ ದೊಡ್ಡದು ಮಾಡುವುದಕ್ಕಾಗುತ್ತದೆಯೇ?

ಶ್ರೀ ಹೆಚ್. ಶಿವಪ್ಪ:- ಈ ಸದನಕ್ಕೆ ಇಷ್ಟು ಹಗುರವಾಗಿ ಕೊಟ್ಟಂಥ ಉತ್ತರವನ್ನು ನಾವು ಹೇಗೆ. .

ಅಧ್ಯಕ್ಷರು:- ಹಗುರವಾಗಿ ಏನೂ ಇಲ್ಲ. ಭಾರವಾಗಿಯೇ ಹೇಳಿದ್ದೇನೆ.

SRI H. SHIVAPPA:- We are supporting and protecting erring officials thereby they do not give replies with honest intention. ಇದನ್ನು ಯಾವಾಗ ಪೂರ್ತಿ ಮಾಡುತ್ತೀರಿ?

ಅಧ್ಯಕ್ಷರು:- ನೀವು ಕೂತುಕೊಂಡರೇ ಅವರು ಹೇಳಬಹುದು. ಹೀಗೆ ನಿಂತುಕೊಂಡಿದ್ದರೆ ಅವರು ಹೇಗೆ ಹೇಳುತ್ತಾರೆ?

ಶ್ರೀ ಬಿ.ಎನ್. ಬಚ್ಚೇಗೌಡ:- ಪರಿಷ್ಕೃತ ಅಂದಾಜು 12.90 ಕೋಟಿ ಇದ್ದುದು ಒಟ್ಟು 30 ಕೋಟಿ ರೂಪಾಯಿ ಆಗಿದೆ. ಈಗ ಆ ಪರಿಷ್ಕೃತ ಅಂದಾಜಿಗೆ ತೆಗೆದುಕೊಂಡು ಆ ಕಾರ್ಯವನ್ನು ಮುಗಿಸಿಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ನಾನೂ ಮತ್ತು ಮಾನ್ಯ ವೈ. ರಾಮಕೃಷ್ಣರವರೂ ಅಲ್ಲಿಗೆ ಹೋಗಿದ್ದಾಗ ನೂರಾರು ಜನರು ಬಂದು ತಮ್ಮ ಅರ್ಜಿಗಳನ್ನು ಕೊಟ್ಟರು. ತಮಗೆ ಗೊತ್ತಿದೆಯೋ ಇಲ್ಲವೋ ಬೇಕಾದರೆ ತಾವು ಮಾಹಿತಿಯನ್ನು ತರಿಸಿಕೊಳ್ಳಿ. ಅಲ್ಲಿ ನೀರನ್ನು ಖರೀದಿಗೆ ತೆಗೆದುಕೊಂಡು ಉಪಯೋಗಿಸಿಕೊಳ್ಳುವ ಪರಿಸ್ಥಿತಿ ಇದೆ. ಎರಡನೇ ಹಂತದ್ದು 12 ಕೋಟಿ ಎಂದು ತಾವೇ ಹೇಳಿದ್ದೀರಿ. 16-6-92ರಲ್ಲಿ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ಎಂದರೆ 4 ವರ್ಷಗಳಾಯಿತು. ಇದುವರೆಗೂ ದಾವಣಗೆರೆಯಂಥ ನಗರದಲ್ಲಿ ಕೆಲಸ ಪೂರ್ತಿ ಆಗಿಲ್ಲ ಎಂದರೆ ಹೇಗೆ? ಇನ್ನು 3-4 ತಿಂಗಳಲ್ಲಾದರೂ ವಿಶೇಷ ಗಮನವನ್ನು ಕೊಟ್ಟು, ಆ ಯೋಜನೆಯನ್ನು ಮುಗಿಸುವುದಕ್ಕೆ ಪ್ರಯತ್ನ ಮಾಡಿ. ನೀರನ್ನು ಕೊಂಡುಕೊಳ್ಳುತ್ತಿರುವ ಕಡೆಯಲ್ಲಿ ಟ್ರಕ್‌ಗಳ ಮೂಲಕ ತಾತ್ಕಾಲಿಕವಾಗಿ ಏನಾದರೂ ವ್ಯವಸ್ಥೆ ಮಾಡುತ್ತಿರೋ ಅಥವಾ ಮಾನ್ಯ ರವೀಂದ್ರನಾಥ್‌ರವರು ಹೇಳಿದಂತೆ ಪೈಪ್ ಕನೆಕ್ಷನ್‌ನ್ನು ಕೊಟ್ಟು ತಕ್ಷಣ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುತ್ತೀರೋ ಹೇಳಿ.

ಶ್ರೀ ಬಿ.ಎನ್. ಬಚ್ಚೇಗೌಡ:- 1996-97ರಲ್ಲಿ ವಿಶೇಷ ಆರ್ಡರನ್ನು ಹೊರಡಿಸಿ ವಿಶೇಷ ಗಮನವನ್ನು ಕೊಟ್ಟು ಆ ಕಾರ್ಯವನ್ನು ಪೂರ್ತಿಗೊಳಿಸಿಕೊಡುತ್ತೇವೆ.

ಅಧ್ಯಕ್ಷರು:- ಪ್ರಕಾಶ್ ಹುಕ್ಕೇರಿಯವರೇ, ನೀವು ತಡವಾಗಿ ಬಂದಿರಿ, ಮಾನ್ಯ ಮಂತ್ರಿಗಳು ಹೊರಟು ಹೋದರು. ಈ ಸದನ ಯಾವ ರೀತಿ ನಡೆಯಬೇಕೆಂದು ಯಾರಿಗೂ ಗೊತ್ತಿಲ್ಲ. ನೀವು ಪ್ರಶ್ನೆಯನ್ನು ಕಳಿಸುವವರು ಅಜೆಂಡಾವನ್ನು ನೋಡಿಕೊಳ್ಳಬೇಕು.

ವಿಷಯ:- ಬೆಳಗಾವಿ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ವಸತಿ ನಿಲಯಗಳು.

348 (1355) **ಶ್ರೀ ಪ್ರಕಾಶ್ ಹುಕ್ಕೇರಿ (ಸದರಲಗ):-** ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1995-96ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಮಂಜೂರಾತಿ ನೀಡಿದ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಸತಿ ನಿಲಯಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಈಗಿರುವ ಎಲ್ಲಾ ವಸತಿ ನಿಲಯಗಳು ಸರಿಯಾಗಿ ಕಾರ್ಯವನ್ನು ನಿರ್ವಹಿಸುತ್ತಿವೆಯೆ?